ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರ ಹೇಳಿಕೆ

**ಪ್ರಶ್ನೆ :-**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ರವರು ಉಡುಪಿ ಜಿಲ್ಲೆ, ಕಾಪು ತಾಲ್ಲೂಕು, ಎಲ್ಲೂರಿನ ಮಹತೋಭಾರ ಶ್ರೀ ವಿಶ್ವೇಶ್ವರ ದೇವಸ್ಥಾನದಲ್ಲಿ ಪುರಾತನ ರೀತಿ ರಿವಾಜುಗಳು, ನಡಾವಳಿಯ ಸಂಪ್ರದಾಯಗಳು, ಆಚರಣೆಯ ಪದ್ಧತಿಗಳು ಅನುಷ್ಠಾನದಲ್ಲಿರುವ ಈ ದೇವಳದಲ್ಲಿ ಪರಂಪರಾಗತವಾಗಿ ನಡೆಯುತ್ತಿರುವ ಸಂಪ್ರದಾಯ ಮತ್ತು ಆಚರಣಾ ಪದ್ಧತಿಗಳನ್ನು ಪ್ರಸ್ತುತ ವ್ಯವಸ್ಥಾಪನಾ ಸಮಿತಿಯೂ ಕಳೆದ ಎರಡು ಮೂರು ವರ್ಷಗಳಿಂದ ಕೈಬಿಟ್ಟಿರುವ ಕುರಿತಂತೆ ನಿಯಮ 72 ರಡಿಯಲ್ಲಿ ಮಾನ್ಯ ಮುಜರಾಯಿ ಮತ್ತು ಹಜ್ ಮತ್ತು ವಕ್ಫ್ ಸಚಿವರನ್ನು ಗಮನವನ್ನು ಸೆಳೆಯ ಬಯಸುತ್ತೇನೆ.

**ಉತ್ತರ :-**

ಉಡುಪಿ ಜಿಲ್ಲೆ, ಕಾಪು ತಾಲ್ಲೂಕು, ಎಲ್ಲೂರಿನ ಮಹತೋಭಾರ ಶ್ರೀ ವಿಶೇಶ್ವರ ದೇವಾಲಯವು ದಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ದೇವಾಲಯದಲ್ಲಿ ಪರಂಪರಾಗತವಾಗಿ ನಡೆಯುತ್ತಿರುವ ಸಂಪ್ರದಾಯ ಮತ್ತು ಆಚರಣಾ ಪದ್ಧತಿಗಳನ್ನು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿ ಮತ್ತು ಅಚರಣೆಯಂತೆ ನಡೆಯುತ್ತಿದ್ದು, ವ್ಯವಸ್ಥಾಪನಾ ಸಮಿತಿಯವರು ಯಾವುದೇ ಸಂಪ್ರದಾಯ ಮತ್ತು ಅಚರಣೆಯನ್ನು ಕೈಬಿಟ್ಟಿರುವುದಿಲ್ಲ.

ಧಾರ್ಮಿಕ ದತ್ತಿ ಇಲಾಖಾ ಆಡಳಿತಕ್ಕೆ ಒಳಪಡುವ ಸಮೂಹ "ಎ" ಪ್ರವರ್ಗದ ಅಧಿಸೂಚಿತ ದೇವಾಲಯದಳಲ್ಲಿನ ಶತ ಶತಮಾನಗಳಿಂದ ಸಂಪ್ರದಾಯ ಬದ್ಧವಾಗಿ ಸಾಗಿ ಬಂದಿರುವ ಆಚರಣೆಗಳನ್ನು ಬದಲಾಯಿಸಲು ವ್ಯವಸ್ಥಾಪನಾ ಸಮಿತಿಗಳಿಗೆ ಅಧಿಕಾರವನ್ನು ನೀಡಲಾಗಿರುವುದಿಲ್ಲ.

ಸಂಖ್ಯೆ: ಕಂಇ 26 ಮುಸಪ್ರ 2023

(ಶಶಿಕಲಾ. ಅ.ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು